ವಿದ್ಯಾಭ್ಯಾಸದ ಇಲಾಖೆ.

ತಾರೀಖು 7ನೇ ಮೂಹೆ ಜನವರಿ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಸ್ಯ 1891ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗೋಸ್ಕರ ಇದರಡೀ ನಮೂದಿಸಿರುವ ಭಾಷಾ ಗ್ರಂಥಗಳು ನಿರ್ಣಯಿಸಲ್ಪಟ್ಟಿರುತ ವೆ.

ಮೊದಲನೇ ಅಂದರೆ ಆವಶ್ಯಕಭಾಷೆ.

ವಿದ್ಯಾರ್ಥಿಗಳ ಪರೀಕ್ಷೆ.

ಕನ್ನಡ	ಪದ್ಯಸಾರ (7ನೇ ಆಥವಾ 8ನೇ ಛಾಪೆ) ಪದ್ಯಗಳು 1–144, 302—362		
	ಕಂಠಪಾಠ	..	72–101, 345—362
ತೆಲುಗು	ನಳಚರಿತ್ರಂ		
	ಕಂಠಪಾಠ	..	ಪುಟಗಳು 1—15
ಅರವ	2ನೇ ನಂಬರ್ ನೀತಿಮಂಜರಿ		
	ಕಂಠಪಾಠ	..	ಪುಟಗಳು 123—200
ಹಿಂದುಸ್ತಾನಿ	ಮಜಮು ಅಯಿಸುರ್ದ್ ಎರಡನೇ ಭಾಗ		ಪುಟಗಳು 1—32
	ಕಂಠಪಾಠ	..	ಪುಟಗಳು 1—16

ಎರಡನೇ ಅಂದರೆ ಐಚ್ಛಿಕ ಭಾಷೆ.

ಸಂಸ್ಕೃತ	ರಘುವಂಶ ಸರ್ಗಗಳು 2 ಮತ್ತು 3
ಫಾರಸಿ	ಗುಲಿಸ್ತಾ 3 ಮತ್ತು 8ನೇ ಅಧ್ಯಾಯಗಳು ಪ್ರಸ್ತಾವನೆಯೊಡನೆ.
ಕನ್ನಡ ತೆಲುಗು ಅರವ ಹಿಂದುಸ್ತಾನಿ	ಮೊದಲನೇ ಭಾಷೆಗೆ ನಿಷ್ಕರ್ಷೆ ಮಾಡಿರುವಂತೆ.

ಉಪಾಧ್ಯಾಯರ ಪರೀಕ್ಷೆ

	ಭಾಷೆ.	
ಕನ್ನಡ	ರಾಜಶೇಖರ ವಿಲಾಸ ಆಶ್ವಾಸಗಳು ..	1—5
	ಜೈಮಿನಿ ಭಾರತ ಸಂಧಿಗಳು ..	1—10
	ಮುದ್ರಾಮಂಜೂಷ ಪುಟಗಳು ..	1—121
ತೆಲುಗು	ಭಾರತಮು (ಸಭಾಪರ್ವಮು) ಪಂಚತಂತ್ರಮು	
ಅರವ	ಭಾರತವೆಣ್ಬಾ (ಆರಣ್ಯ ಪರ್ವಂ) ಪಂಚತಂತ್ರಂ	
ಹಿಂದುಸ್ತಾನಿ ಮತ್ತು ಫಾರಸಿ	ಜೋಸ್ತಾ, ಅಧ್ಯಾಯಗಳು 6, 7, 9, ಮತ್ತು 10 ಪ್ರಸ್ತಾವನೆಯೊಡನೆ.	
	ನೈರಂಗೀಖಿಯಾಲ್ 1ನೇ ಭಾಗ (ಮಹಮ್ಮದಹುಸೇ ಅಜಾದಿಯವರಿಂದ ರಚಿಸಲ್ಪಟ್ಟದ್ದು.)	
	ಅನ್ವಾರಿಸುಹೇಲಿ ಅಧ್ಯಾಯಗಳು 9—14 ಪ್ರಸ್ತಾವನೆಯೊಡನೆ.	

ತಾರೀಖು 15ನೇ ಮೂಹೆ ಜನವರಿ 1890ನೇ ಇಸವಿ.

ಸ್ಯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ನೆಲವಂಗಲದ ತಾಲ್ಲೂಕು ತ್ಯಾಮಗೊಂಡ್ಲು ಕನ್ನಡ ತಾಲ್ಲೂಕು ಬ್ರಾಂಚ್ ಸ್ಕೂಲಿನಿಂದ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗಳಿಗೆ ಇದರಡೀ ಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1.	ರಾಜಾಲಿಂಗಯ್ಯ ಶೆಟ್ಟಿ, ನೆಲವಂಗಲ ತಾಲ್ಲೂಕು ತ್ಯಾಮಗೊಂಡ್ಲು ವಾಸಸ್ಥ	ಗಣಿತದಲ್ಲಿ ಅಧಿಕವಾದ ನಂಬರುಗಳಿಗಾಗಿ	5 ರೂಪಾಯಿನ ಬಂದು ಬೆಳ್ಳಿ ಬಟ್ಟು
2.	ಶಂಕರಪ್ಪ, ಡಿಟೋ ಡಿಟೋ	ಒಟ್ಟು ಸಂಖ್ಯೆಯಲ್ಲಿ ಅಧಿಕವಾದ ನಂಬರುಗಳಿಗಾಗಿ	ಗಣಿತಾರ್ನವ
3.	ಯಲ್. ವೆಂಕಟಸಾಮಿಶೆಟ್ಟಿ, ಡಿಟೋ ಡಿಟೋ	ಭಾಷೆಯಲ್ಲಿ ಅಧಿಕ ನಂಬರುಗಳಿಗಾಗಿ	ಮಂಗಳೂರು ಛಾಪೆ ಶಬ್ದಮಣಿದರ್ಪಣ
4.	ಏ. ದೊಡ್ಡವೆಂಕಟಸಾಮಿ ಶೆಟ್ಟಿ, ಡಿಟೋ	ಐಚ್ಛಿಕಾಂಶಗಳಲ್ಲಿ ಅಧಿಕ ನಂಬರುಗಳಿಗಾಗಿ	ಆರೋಗ್ಯಪ್ರವೇಕದಾಯಿನಿ ಮತ್ತು ಆರೋಗ್ಯಸೂತ್ರ ಸಂಗ್ರಹ

ತಾರೀಖು 16ನೇ ಮೂಹೆ ಜನವರಿ 1890ನೇ ಇಸವಿ.

ಸ್ಯ 1890 ಮತ್ತು 1891ನೇ ಇಸವಿಗಳಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವಂಥಾವರಿಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರಾದ ಮೆ|| ಅಬ್ದುಲ್‌ರಹಿವರ್ಸಾಯವರ ಮುಖಾಂತ್ರ ಇದರಡೀಕಂಡಂತೆ ಬಹುಮಾನಗಳು ಕೊಡಲ್ಪಡುವವು:—

ಉಪಾಧ್ಯಾಯರ ಪರೀಕ್ಷೆ.

ಹಿಂದುಸ್ತಾನಿಯೊಡನೆ ಫಾರಸಿ.

1. ಸುಬೇದಾರ್ ಮೇಜರ್ ಅಬ್ದುಲ್‌ಖಾದರ್ ಸಾಹೇಬರವರ ಬಹುಮಾನ, ಭಾಷಾಗ್ರಂಥಗಳಲ್ಲಿಯು ಮತ್ತು ಇತರ ವಿಷಯಗಳಲ್ಲಿಯು ಅಧಿಕವಾದ ನಂಬರು ಪಡೆಯುವಂಥಾವನಿಗೆ .. .. } ರೂ. 15

ವಿದ್ಯಾರ್ಥಿಗಳ ಪರೀಕ್ಷೆ.

ಹಿಂದುಸ್ತಾನಿ.

2. ಸುಬೇದಾರ್ ಮೇಜರ್ ಸಫ'ದರ್ ಅಲ್ಲೀ ಸಾಹೇಬಹದೂರವರ ಬಹುಮಾನ, ಕನ್ನಡವನ್ನ ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. .. } ರೂ. 10

3. ಗುಂಡ್ಲುಪೇಟೆ ತಾಲ್ಲೂಕು ಅಮಲ್‌ದಾರ್ ಮಿರ್‌ಖಾದರ್ ಅಲ್ಲೀ ಸಾಹೇಬರವರ ಬಹುಮಾನ, ಭಾಷಾಗ್ರಂಥಗಳಲ್ಲಿಯು ಮತ್ತು ಇತರ ವಿಷಯಗಳಲ್ಲಿಯು ಅಧಿಕವಾದ ನಂಬರು ಪಡೆಯುವಂಥಾವನಿಗೆ. } ರೂ. 10

ಕನ್ನಡ.

4. ಅಮಲ್‌ದಾರ್ ಅಬ್ದುಲ್ ಸಮತ್ತ್ ಸಾಹೇಬರವರ ಬಹುಮಾನ, ಹಿಂದುಸ್ತಾನಿಯನ್ನ ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. } ರೂ. 10

5. ತುಂಕೂರು ತಾಲ್ಲೂಕು ಅಮಲ್‌ದಾರ್ ಅಬ್ದುಲ್ ಅಜೀಜ್ ಸಾಹೇಬರವರ ಬಹುಮಾನ, ಫಾರಸಿಯನ್ನ ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. } ರೂ. 10

ತಾರೀಖು 17ನೇ ಜನವರಿ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದ ಸರ್ಕಾರೀ ಕಾಲೀಜ್ ಅಥವಾ ಹೈ ಸ್ಕೂಲಿನಲ್ಲಿ ನಡಿಸಲ್ಪಡುವದು. ಸದರೀ ಪರೀಕ್ಷೆಯು ಸ್ರ 1890ನೇ ಇಸವಿ ಫಿಬ್ರವರಿ ತಿಂಗಳು 17ನೇ ಸೋಮವಾರದ ದಿವಸ ಆರಂಭಿಸುತ್ತದೆ. ಪರೀಕ್ಷೆಯು ಇದರಡೀಕಂಡ ಕಾಲಕ್ರಮವಾಗಿ ನಡಿಸಲ್ಪಡುವದು.

ದಿವಸ.	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
	ಘಂಟೆ.	ಅಂಕಗಳು.	ಘಂಟೆ.	ಅಂಕಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ. 2 „ 5 „	ಭಾಷಾ ಗ್ರಂಥ ವ್ಯಾಕರಣ (ಆವಶ್ಯಕ ಭಾಷೆ.) ಡಿಟೋ ಡಿಟೋ (ಎರಡನೇ ಭಾಷೆ)	10ರಿಂದ 1ರವರಿಗೆ 2 „ 4 „ 4 „ 5 „	ಪದ್ಯಕಾವ್ಯ ವಾಕ್ಯವಿಭಜನೆ. ವ್ಯಾಕರಣ. ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರ ವರಿಗೆ 11 „ 1 „ 2 „ 5 „	ಬರವಣಿಗೆ ಅಕ್ಷರ ಸಂಯೋಜನ (ಆವಶ್ಯಕ ಭಾಷೆ) ಚರಿತ್ರೆ) ಭೂಗೋಳ,ಭೂಪಟ ನಕ್ಷೆಬರಿಯುವಿಕೆ.	10ರಿಂದ 1ರವರಿಗೆ 2 „ 4 „	ಚರಿತ್ರೆ. ರೇಖಾಗಣಿತ.
ಮೂರನೇ ದಿವಸ.	10ರಿಂದ 12ರ ವರಿಗೆ 12 „ 1 „ 2 „ 3 30 3. 30 5 „	ಅಂಕಗಣಿತ ಬರವಣಿಗೆ ಅಕ್ಷರಸಂಯೋಜನ (ಎರಡನೇ ಭಾಷೆ) ವ್ಯವಸಾಯಶೋಧಿನಿ ಆರೋಗ್ಯಶೋಧಿನಿ	10ರಿಂದ 1ರವರಿಗೆ 2 „ 4 „	ಅಂಕಗಣಿತ. ಬೀಜಗಣಿತ.
ನಾಲ್ಕನೇ ದಿವಸ.	10ರಿಂದ 11-30ವರಿಗೆ 11.30 1 „ 2 3 30 3·30 5	ಕ್ಷೇತ್ರಗಣಿತ ಭಾಷಾಂತರ ಹೊಲಿಗೆ. ಪಾಕಶಾಸ್ತ್ರ)	10ರಿಂದ 1ರವರಿಗೆ 2 „ 5 „	ಭೂಗೋಳ. ಶಾಸ್ತ್ರವಿಷಯ.

ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಿಂದ ನಮೂದಿಸಲ್ಪಟ್ಟ ಅಂಶಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರೀಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರೀಕ್ಷೆಯಿಂಗಿವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಕಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಬಿಂದಾವರ್ತಿ ಬಿಟ್ಟು ಬಂದ ಅನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷೆ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೇ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಡೈರೆಕ್ಟರ್ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

4. ಪರೀಕ್ಷೆ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತುಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಡೈರೆಕ್ಟರ್ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಟಿಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯು ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಶಿವಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಷಿಪ್ಟ ಕೆಟ್ಟುಹೋದ ಕಾಗದ ವಗೈರೆಗಳು" ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.